**ದಿನಾಂಕಃ 27.09.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಾದ ಶ್ರೀ.KP ರವರಿಂದಃ**

1) ಈ ಪ್ರಕರಣದಲ್ಲಿ ನಾನು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ತಿಳಿದಿದೆ. ಅಪಘಾತದ ಸಮಯದಲ್ಲಿ ನಾನು ಸರಕು ಸಾಗಾಣಿಕೆ ವಾಹನದಲ್ಲಿ ಇದ್ದೆನು ಮತ್ತು ನಾನು ಚಾಲಕನ ಸೀಟಿನ ಪಕ್ಕದಲ್ಲಿ ಕುಳಿತುಕೊಂಡಿದ್ದೆನು. ನಾನು ಹಾಜರುಪಡಿಸಿರುವಂತಹ ಪೋಲಿಸ್ ದಾಖಲೆಗಳಲ್ಲಿ ಇರುವ ಮಾಹಿತಿಯ ಪ್ರಕಾರವೇ ಅಪಘಾತದ ಸಮಯದಲ್ಲಿ ನಾನು ವಿದ್ಯಾರ್ಥಿ ಆಗಿದ್ದೆನು ಎಂದರೆ ಸುಳ್ಳು. ನಾನು ಪೋಲಿಸರ ಮುಂದೆ ನೀಡಿರುವ ಹೇಳಿಕೆಯ ನಕಲನ್ನು ಹಾಜರುಪಡಿಸಲು ತೊಂದರೆ ಇಲ್ಲ.

2) ನಮ್ಮ ತಂದೆಯು ವ್ಯವಸಾಯ ಮಾಡುತ್ತಾರೆ. ನಮ್ಮ ತಂದೆಯು ಮತ್ತು ನಮ್ಮ ಕುಟುಂಬದವರು ಗುಬ್ಬಿ ತಾಲ್ಲೂಕಿನಲ್ಲಿ ಇರುವ ಮತ್ತಿಕೆರೆಯಲ್ಲಿ ವಾಸವಿದ್ದಾರೆ.

3) ಬಟ್ಟೆ ಮತ್ತು ಇತರೆ ಉಡುಗೆತೊಡುಗೆಗಳನ್ನು ತರುವ ಉದ್ದೇಶಕ್ಕಾಗಿ ನಾವು ಹೋಗುತ್ತಿದ್ದೆವು ಎಂಬ ವಿಷಯವು ಪೋಲಿಸ್ ದಾಖಲೆಗಳಲ್ಲಿ ನಮೂದು ಆಗಿಲ್ಲ ಎಂದರೆ ಸುಳ್ಳು.

4) ಸರಕು ಸಾಗಾಣಿಕೆ ವಾಹನದಲ್ಲಿ ನಾನು ಪ್ರಯಾಣಿಕನಾಗಿ ಪ್ರಯಾಣ ಮಾಡುತ್ತಿದ್ದೆನು ಮತ್ತು ಆ ಕಾರಣದಿಂದ ವಿಮಾ ಕಂಪೆನಿಯವರು ನನಗೆ ಯಾವುದೇ ಪರಿಹಾರವನ್ನು ಕೊಡಲು ಜವಾಬ್ದಾರರು ಆಗಿರುವುದಿಲ್ಲ ಮತ್ತು ಆ ವಾಹನದ ಮಾಲೀಕರೇ ನನಗೆ ಪರಿಹಾರವನ್ನು ಕೊಡಬೇಕು ಎಂದರೆ ಸುಳ್ಳು.

5) ಅಪಘಾತದ ನಂತರ ನನ್ನನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ನಂತರ ನನ್ನನ್ನು ಬೆಂಗಳೂರಿನ ಉಪ್ಪಾರಪೇಟೆಯಲ್ಲಿ ಇರುವಂತಹ ಶ್ರೀನಿವಾಸ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ. ಎರಡು ವಾರಗಳ ಕಾಲ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ.

6) ನನ್ನ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ನನ್ನ ತಾಯಿಯ ತಮ್ಮನು ಕೊಟ್ಟಿದ್ದಾರೆ. ನಮ್ಮ ತಾಯಿಯ ತಮ್ಮನು ಆಸ್ಪತ್ರೆಯ ಬಿಲ್ ಅನ್ನು ಯಾವ ರೀತಿ ಕೊಟ್ಟಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಮನೆ ಮನೆಗೆ ಗ್ಯಾಸ್ ಸಿಲಿಂಡರ್ ಗಳನ್ನು ಕೊಡುವ ಕೆಲಸವನ್ನು ನನ್ನ ಮಾವನು ಮಾಡುತ್ತಾರೆ.

7) ಕೇವಲ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಮೆಡಿಕಲ್ ಬಿಲ್ಲುಗಳನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ

ಸುಳ್ಳು. ನಾನು ಹೇಳಿದ ಹಾಗೆ ನನಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರಲಿಲ್ಲ ಮತ್ತು ಆ ಕಾರಣದಿಂದಲೇ ನಾನು ಯಾವುದೇ **X-ray** ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು. ನಾನು ಬಲಗೈಯನ್ನು ಉಪಯೋಗಿಸುವ ವ್ಯಕ್ತಿ ಆಗಿದ್ದೇನೆ.

8) ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಖಂಡಿಕೆ **1** ರಿಂದ **4** ರ ವರೆಗೆ ಹೇಳಿರುವ ವಿಷಯವನ್ನು ನಾನು ನನ್ನ ಅನುಕೂಲಕ್ಕಾಗಿ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸುಳ್ಳು.

9) ನಾನು ನನ್ನ ಚಿಕಿತ್ಸೆಗಾಗಿ **3,20,000-00** ರೂಪಾಯಿಗಳನ್ನು ಖರ್ಚು ಮಾಡಿರುವುದಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

10) ಅಪಘಾತದ ಸಮಯದಲ್ಲಿ ನನಗೆ **18** ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಹೆಸರಿನಲ್ಲಿ ಯಾವುದೇ ಬ್ಯಾಂಕ್ ಖಾತೆಯು ಇರಲಿಲ್ಲ.

11) ಕೇವಲ ಪರಿಹಾರವನ್ನು ಪಡೆದುಕೊಳ್ಳುವ ಉದ್ದೇಶದಿಂದ ಮಾತ್ರ "ಅಪಘಾತದ ಸಮಯದಲ್ಲಿ ನಾನು ವ್ಯಾಪಾರ ಮಾಡುತ್ತಿದ್ದೆನು" ಎಂಬುದಾಗಿ

ನಾನು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸುಳ್ಳು. ಅಪಘಾತದ ಸಮಯದಲ್ಲಿ ನಾನು ಕೇವಲ ವಿದ್ಯಾರ್ಥಿ ಆಗಿದ್ದೆನು ಎಂದರೆ ಸುಳ್ಳು. ಅಪಘಾತದ ಸಮಯದಲ್ಲಿ ನನಗೆ ಯಾವುದೇ ಆದಾಯವು ಇರಲಿಲ್ಲ ಎಂದರೆ ಸುಳ್ಳು.

12) ಬೆಂಗಳೂರಿನ ಬ್ಯಾಟರಾಯನ ಪುರದಲ್ಲಿ ನಾನು ವಾಸ ಇದ್ದೇನೆ ಎಂದು ತೋರಿಸಲು ಯಾವುದಾದರೂ ದಾಖಲೆಗಳು ಇವೆಯೋ ಹೇಗೆ ಎಂದರೆ ಅದು ನನ್ನ ಮಾವನ ಮನೆ ಆಗಿದೆ ಮತ್ತು ನನ್ನ ಬಳಿ ದಾಖಲೆಗಳು ಇರುವುದಿಲ್ಲ.

13) ಕೇವಲ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 2 ನೇ ಎದುರುದಾರರ ಪರವಾಗಿಃ**

2 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.